# ಗೇಟ್ಸ್ 'ನಂಬರ್ ಒನ್'



ಬಿಲ್ ಗೇಟ್ಸ್ ಮತ್ತೆ ಜಗತ್ತಿನ 'ನಂಬರ್ ಒನ್ ಶ್ರೀಮಂತ' ಎಂದು ಫೋರ್ಬ್ಸ್ ಪ್ರಕಟಿಸಿದೆ. ಕಳೆದ ಒಂದು ವರ್ಷದಿಂದ ಅಮೆಜಾನ್‌ನ ಸ್ಥಾಪಕ ಜೆಫ್ ಬಿಜೋಸ್ ಈ ಸ್ಥಾನದಲ್ಲಿದ್ದ. ಈಗ ಅವನನ್ನು ಹಿಂದಿಕ್ಕಿ ಬಿಲ್ ಗೇಟ್ಸ್ ಮತ್ತೆ ಮುಂಚೂಣಿಗೆ ಬಂದಿದ್ದಾನೆ. ಬಿಲ್ ಗೇಟ್ಸ್‌ಗೆ ಈ ಅಗ್ರಸ್ಥಾನ ಹೊಸತೇನಲ್ಲ. 1994ರಿಂದ 2018ರವರೆಗೆ 24 ವರ್ಷಗಳ ಕಾಲ ಆತನೇ ಜಗತ್ತಿನ ಅತಿದೊಡ್ಡ ಶ್ರೀಮಂತ ಆಗಿದ್ದವನು. ಅಮೆಜಾನ್‌ನ ಉದ್ಯಮ ಕಳೆದ ವರ್ಷ ಒಂದೇ ಸಮನೆ ಏರಿಕೆ ಕಂಡದ್ದರಿಂದ ಬಿಜೋಸ್ ಆಸ್ತಿ ಮೌಲ್ಯ ಏರಿಕೆಯಾಗಿತ್ತು. ಮೈಕ್ರೊಸಾಫ್ಟ್ ಸ್ಥಾಪಕ ಗೇಟ್ಸ್‌ನ ಒಟ್ಟು ಆಸ್ತಿ ಮೌಲ್ಯ ಈಗ 105.7 ಶತಕೋಟಿ ಡಾಲರ್. ಬಿಜೋಸ್‌ನದ್ದು 103.9 ಶತಕೋಟಿ ಡಾಲರ್. ಅಮೆಜಾನ್ ಕಂಪೆನಿಯ ಈ ವರ್ಷದ ಮೂರನೇ ತ್ರೈಮಾಸಿಕದ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಷೇರುಪೇಟೆಯಲ್ಲಿ ಅದರ ಷೇರುಗಳ ಮೌಲ್ಯ ಒಮ್ಮೆಲೆ ಕುಸಿದಿದೆ. ಬಿಜೋಸ್ ಕಳೆದುಕೊಂಡದ್ದು 7 ಶತಕೋಟಿ ಡಾಲರ್! ಇದರ ಪರಿಣಾಮ ಬಿಲ್ ಗೇಟ್ಸ್ ಮತ್ತೆ ನಂಬರ್ ಒನ್ ಸ್ಥಾನಕ್ಕೇರಿದ್ದಾನೆ.

ಬಿಲ್ ಗೇಟ್ಸ್‌ನ ಸಾಮ್ರಾಜ್ಯ ಇವತ್ತು ಎಷ್ಟು ಎತ್ತರಕ್ಕೆ ಬೆಳೆದಿದೆಯೆಂದರೆ, ಆತನಿಗೀಗ ಗಳಿಸುವುದಕ್ಕಿಂತ ಗಳಿಸಿದ್ದನ್ನು ಖರ್ಚು ಮಾಡುವುದು ಹೇಗೆ ಎನ್ನುವುದೇ ದೊಡ್ಡ ಸಮಸ್ಯೆ. 1994ರ ಜನವರಿ 1ರಂದು ಮೆಲಿಂಡಾ ಫ್ರೆಂಚ್‌ಳನ್ನು ಮದುವೆಯಾಗಿ ಮದುವೆಯ ಬೆಳ್ಳಿಹಬ್ಬ ಆಚರಿಸುತ್ತಿರುವ ಗೇಟ್ಸ್, ಮೂವರು ಮಕ್ಕಳಿಗೆ ಹೆಚ್ಚಿನ ಆಸ್ತಿ ಬರೆದಿಡುವ ಮೂಡ್‌ನಲ್ಲಿಲ್ಲ. ಅದರ ಬದಲಾಗಿ ಆರೋಗ್ಯ ಮತ್ತು ಅಮೆರಿಕನ್ನರ ಶಿಕ್ಷಣಕ್ಕೆ ಹೆಚ್ಚು ಹಣ ಖರ್ಚು ಮಾಡಲು ನಿರ್ಧರಿಸಿದ್ದಾನೆ. ದಾನ ದತ್ತಿಗೆಂದೇ ಆತ ಸ್ಥಾಪಿಸಿರುವ ಗೇಟ್ಸ್ ಮೆಲಿಂಡಾ ಫೌಂಡೇಷನ್, ಪ್ರತಿ ವರ್ಷ ಕೋಟ್ಯಂತರ ಡಾಲರ್‌ಗಳನ್ನು ಆರೋಗ್ಯ ಕ್ಷೇತ್ರದಲ್ಲಿ ಖರ್ಚು ಮಾಡುತ್ತಿದೆ.

ಅಮೆರಿಕದ ಅಧ್ಯಕ್ಷ ಚುನಾವಣೆಗೆ ಪೂರ್ವಭಾವಿ ಸುತ್ತಿನ ಪ್ರಚಾರ ಶುರುವಾಗಿದ್ದು, ಅಮೆರಿಕದಲ್ಲಿ ಅತಿಶ್ರೀಮಂತರಿಗೆ ಅತ್ಯಧಿಕ ತೆರಿಗೆ ವಿಧಿಸಬೇಕು ಎಂಬ ಕೂಗೆದ್ದಿದೆ. ಇದೊಂದು ಚುನಾವಣಾ ಭರವಸೆಯ ವಿಷಯವಾಗಿಯೂ ಪ್ರಚಾರ ಪಡೆಯುತ್ತಿದೆ. ಹೆಚ್ಚು ತೆರಿಗೆ ಕಟ್ಟುವುದಕ್ಕೆ ಗೇಟ್ಸ್ ವಿರೋಧವೇನಿಲ್ಲ. 'ಈಗಾಗಲೆ 71 ಸಾವಿರ ಕೋಟಿ ರೂಪಾಯಿ ತೆರಿಗೆ ಕಟ್ಟಿದ್ದೇನೆ. ಹೆಚ್ಚು ಎಂದರೆ ಇನ್ನೂ ಎಷ್ಟು ಎನ್ನುವುದನ್ನು ಹೇಳಬೇಕಲ್ಲ? 100 ಶತಕೋಟಿ ಡಾಲರ್ ಕಟ್ಟಿ ಎಂದೆಲ್ಲ ಹೇಳಿದರೆ ಆಗುತ್ತದೆಯೆ?' ಎನ್ನುವುದು ಗೇಟ್ಸ್ ಪ್ರಶ್ನೆ.

ಈ ಎತ್ತರಕ್ಕೆ ಏರಲು ಗೇಟ್ಸ್ ಸಾಕಷ್ಟು ಬೆವರು ಸುರಿಸಿದ್ದಾನೆ. 'ಒಂದು ಕಾಲದಲ್ಲಿ ವೀಕೆಂಡ್, ಸಂಡೇ ಎಲ್ಲವನ್ನೂ ಮರೆತುಬಿಟ್ಟಿದ್ದೆ' ಎಂದು ಹಳೆಯ ಕಷ್ಟದ ದಿನಗಳನ್ನು ನೆನಪಿಸುತ್ತಾನೆ ಗೇಟ್ಸ್. ಈಗ ವಿಶ್ವದ ನಂಬರ್ ಒನ್ ಶ್ರೀಮಂತನ ಜೀವನಶೈಲಿಯ ಬಗ್ಗೆ ತಿಳಿದುಕೊಳ್ಳಲು ಜಗತ್ತಿನಾದ್ಯಂತ ಯುವಜನರಿಗೆ ಎಲ್ಲಿಲ್ಲದ ಕುತೂಹಲ. ಆತನ ಬಳಿಕ ಎಷ್ಟು ಕಾರುಗಳಿವೆ, ಜಗತ್ತಿನ ಎಲ್ಲೆಲ್ಲಿ ಆತನಿಗೆ ಮನೆಗಳಿವೆ. ಪತ್ನಿಯಲ್ಲದೆ ಇನ್ಯಾರಾದರೂ ಗೆಳತಿಯರು ಇದ್ದಾರಾ? ಎಂದೆಲ್ಲ ಗೂಗಲ್‌ನಲ್ಲಿ ಸಾಕಷ್ಟು ಹುಡುಕಾಟ ನಡೆಸುವವರಿದ್ದಾರೆ. ಗೇಟ್ಸ್‌ಗೆ ಪೋರ್ಶ್ ಕಾರು ಎಂದರೆ ಬಹಳ ಪ್ರೀತಿ. ಆತನ ಬಳಿ ಮೂರು ಪೋರ್ಶ್ ಕಾರುಗಳಿವೆ. 911, 930 ಮತ್ತು 959. ಇವುಗಳಲ್ಲಿ ಪೋರ್ಶ್ 959 ಅತ್ಯಂತ ವಿರಳ ಕಾರು ಎಂದೇ ಹೆಸರು ಪಡೆದಿದೆ. ಕಂಪನಿಯು ಒಟ್ಟು 337 'ಪೋರ್ಶ್ 959' ಕಾರುಗಳನ್ನಷ್ಟೇ ತಯಾರಿಸಿದೆ.

ಜಗತ್ತಿನ ಎಲ್ಲ ಕೋಟ್ಯಧಿಪತಿಗಳೂ ಐಫೋನ್ ಇಟ್ಟುಕೊಂಡಿದ್ದಾರೆ. ಆದರೆ ಬಿಲ್ ಗೇಟ್ಸ್ ಬಳಿ ಐಫೋನ್ ಇಲ್ಲ. ಆತ ಇತ್ತೀಚೆಗೆ ಖರೀದಿಸಿದ ಫೋನ್ ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಸ್8. ಆಂಡ್ರಾಯ್ಡ್ ಫೋನದು. ಹಾಗೆಂದು ಆಪಲ್ ಸಂಸ್ಥಾಪಕ ಸ್ಟೀವ್ ಜಾಬ್ಸ್ ಬಗ್ಗೆ ಗೇಟ್ಸ್‌ಗೆ ಪ್ರೀತಿ ಇಲ್ಲವೆಂದಲ್ಲ. 'ಸ್ಟೀವ್ ಅತ್ಯಂತ ಪ್ರತಿಭಾವಂತ' ಎಂದು ಗೇಟ್ಸ್ ಕೂಡಾ ಶ್ಲಾಘಿಸುತ್ತಾನೆ. ಆಂಡ್ರಾಯ್ಡ್ ಬಗ್ಗೆ ಗೇಟ್ಸ್‌ನದ್ದೊಂದು ಬೇಜಾರಿನ ಸಂಗತಿಯೂ ಇದೆ. 'ನಾನು ನನ್ನ ಜೀವನದಲ್ಲಿ ಮಾಡಿರುವ ದೊಡ್ಡ ತಪ್ಪು ಎಂದರೆ 2005ರಲ್ಲಿ ಗೂಗಲ್ ಕಂಪೆನಿಯವರು ಆಂಡ್ರಾಯ್ಡ್ ಖರೀದಿಸಲು ಬಿಟ್ಟದ್ದು' ಎಂದು ಈಗಲೂ ಆತ ಪಶ್ಚಾತ್ತಾಪ ಪಡುತ್ತಾನೆ. ಆಗ ಗೂಗಲ್ ಕಂಪೆನಿ ಆಂಡ್ರಾಯ್ಡ್ ಅನ್ನು 50 ದಶಲಕ್ಷ ಡಾಲರ್‌ಗೆ ಖರೀದಿಸಿತ್ತು. ಗೇಟ್ಸ್ ಅದರ ಖರೀದಿಗೆ ಮನಸ್ಸು ಮಾಡಿದ್ದರೆ ಅದು ಜುಜುಬಿ ದುಡ್ಡೇ. 'ಹೂಡಿಕೆ ಮಾಡುವಾಗ ಎದುರಾಳಿಯ ಮೇಲೂ ಕಣ್ಣಿಟ್ಟಿರಬೇಕು. ಕೆಲವೊಮ್ಮೆ ನಾನೇ ಯಾಮಾರಿಬಿಡುತ್ತೇನೆ' ಎಂದಿದ್ದಾನೆ ಗೇಟ್ಸ್.

ಶ್ರೀಮಂತರು ಹೇಗೆ ಬದುಕಿದರೂ ಟೀಕೆಗಳನ್ನು ಎದುರಿಸುತ್ತಾರೆ. ಗೇಟ್ಸ್ ಕೂಡಾ ಅದಕ್ಕೆ ಹೊರತಲ್ಲ. ಇತ್ತೀಚೆಗೆ ಜಗತ್ತಿನ ವಾತಾವರಣದಲ್ಲಿ ಹೆಚ್ಚುತ್ತಿರುವ ಕಾರ್ಬನ್ ಡೈ ಆಕ್ಸೈಡ್ ಬಗ್ಗೆ ತೀವ್ರ ಕಳವಳ ಹೆಚ್ಚಾಗುತ್ತಿದೆ. ಜಾಗತಿಕ ತಾಪಮಾನ ತಗ್ಗಿಸಲು ವಿಮಾನಗಳ ಹಾರಾಟವನ್ನು ಕಡಿಮೆ ಮಾಡಬೇಕು ಎಂಬ ಕೂಗೆದ್ದಿದೆ. ಪರಿಸರವಾದಿಗಳು ಪ್ರತಿಯೊಬ್ಬ ಕೋಟ್ಯಧಿಪತಿಯೂ ಎಷ್ಟು ಬಾರಿ ವಿಮಾನಗಳಲ್ಲಿ ಓಡಾಡುತ್ತಾರೆ ಎನ್ನುವುದನ್ನು ಲೆಕ್ಕ ಹಾಕುತ್ತಿದ್ದಾರೆ. ಗೇಟ್ಸ್ ಬಳಿ ಸಹಜವಾಗಿಯೇ ಸ್ವಂತ ಜೆಟ್ ಇದೆ. 2017ರ ಒಂದು ವರ್ಷದಲ್ಲೇ ಗೇಟ್ಸ್ 59 ಸಲ ಈ ವಿಮಾನದಲ್ಲಿ ಪ್ರಯಾಣ ಬೆಳೆಸಿದ್ದಾನಂತೆ. ಒಟ್ಟು ಪ್ರಯಾಣಿಸಿದ್ದು 3,43,000 ಕಿ.ಮೀ. ಅಂದರೆ 1600 ಟನ್‌ನಷ್ಟು ಕಾರ್ಬನ್ ಡೈ ಆಕ್ಸೈಡ್ ಗೇಟ್ಸ್ ಒಬ್ಬನಿಂದಲೇ ಉತ್ಪಾದನೆ ಆಗಿದೆ. ಪ್ರತಿ ವ್ಯಕ್ತಿಯ ವಾರ್ಷಿಕ ಸಿಒ2 ಉತ್ಪಾದನೆ 10 ಟನ್‌ನಷ್ಟು ಆಗಿರುವಾಗ ಗೇಟ್ಸ್‌ನಿಂದ ಪರಿಸರಕ್ಕೆ ಎಷ್ಟೊಂದು ಹಾನಿಯಾಗುತ್ತಿದೆ ಎನ್ನುವುದನ್ನು ಲೆಕ್ಕ ಹಾಕಿ ಎನ್ನುತ್ತಿದ್ದಾರೆ ಪರಿಸರ ಹೋರಾಟಗಾರರು. ಅದೇನೇ ಇದ್ದರೂ ಗೇಟ್ಸ್ ಫೌಂಡೇಷನ್ ಜಗತ್ತಿನ ಜನರ ಆರೋಗ್ಯಕ್ಕಾಗಿ ಖರ್ಚು ಮಾಡುತ್ತಿರುವ ಹಣದ ಬಗ್ಗೆ ಎಲ್ಲೆಡೆ ಮೆಚ್ಚುಗೆ ಇದೆ. 2016ರಲ್ಲಿ ಒಂದೇ ವರ್ಷದಲ್ಲಿ ಗೇಟ್ಸ್ ಫೌಂಡೇಷನ್ 45 ದೇಶಗಳ ಆರೋಗ್ಯ ಕ್ಷೇತ್ರದಲ್ಲಿ 2 ಶತಕೋಟಿ ಡಾಲರ್ ಖರ್ಚು ಮಾಡಿದೆ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65